ಪ್ರಾಧ್ಯಾಪಕ ಓ.ಕೆ. ನಂಬಿಯಾರ್ ಅವರು ಎಸ್‌ಪರ್ಸನ್‌ನ **Growth and Structure of the English Language** ಪಾಠ ಮಾಡುತ್ತಿದ್ದರು. ಸಂಸ್ಕೃತ – ಇಂಗ್ಲಿಷ್ ಮತ್ತು ಜಗತ್ತಿನ ಭಾಷಾ ಸಂಬಂಧದ ವಿಸ್ಮಯಕರ ವಿವರಗಳಲ್ಲಿ ಆಸಕ್ತಿ ಬಂತು. ಇಂಗ್ಲಿಷ್ ಓದುತ್ತಿದ್ದರೂ ಆಗ ನಾನು ಹೆಚ್ಚಾಗಿ ಇದ್ದುದು ಕನ್ನಡ ಬಲ್ಲ ಸ್ನೇಹಿತರೊಡನೆ. ಟಿ.ಎನ್. ಸೀತಾರಾಮ್ ಕನ್ನಡ ಓದುತ್ತಿದ್ದವರಲ್ಲವಾದರೂ ಕನ್ನಡದ ಬಗ್ಗೆ ಹೆಚ್ಚು ಮಾತಾಡುತ್ತಿದ್ದರು. ಇನ್ನು ನನ್ನ ತುಂಬ ಹತ್ತಿರದ ಕನ್ನಡದ ಗೆಳೆಯರು ಕಿ.ರಂ. ನಾಗರಾಜ ಮತ್ತು ಕೆ.ವಿ. ನಾರಾಯಣ. ಎಲ್.ಎಸ್. ಶೇಷಗಿರಿರಾವ್, ವಿಮಲಾ ರಾಮರಾವ್, ಇವರೆಲ್ಲ ಚೆನ್ನಾಗಿ ಕನ್ನಡ ಬಲ್ಲ ಅಧ್ಯಾಪಕರೇ ಆಗಿದ್ದರಲ್ಲ! ಪಿ. ಲಂಕೇಶ್ ಇಂಗ್ಲಿಷ್ ಮೇಷ್ಟ್ರು, ಕನ್ನಡ ಲೇಖಕರು. ಅದಾಗತಾನೇ ಲಂಕೇಶ್ ಮೇಷ್ಟ್ರು 'ಅಕ್ಷರ ಹೊಸ ಕಾವ್ಯ' ಸಂಪಾದಿಸುತ್ತಿದ್ದರು. ನಾವೆಲ್ಲ ಅದರ ಕೆಲಸ ಮಾಡುತ್ತಿದ್ದೆವು. ಇತ್ತ ಕಿ.ರಂ. ಅವರಿಂದ ಕುಮಾರವ್ಯಾಸ ಮಾತ್ರವಲ್ಲದೆ, ಹಳಗನ್ನಡ ಕಾವ್ಯಗಳ ವ್ಯಾಖ್ಯಾನ ವಿಮರ್ಶೆ ಕೇಳಿದರೆ ಅತ್ತ ವೈಎನ್‌ಕೆ ಅವರಿಂದ ಜಗತ್ತಿನೆಲ್ಲೆಡೆಯ ಆಧುನಿಕ ಸಾಹಿತ್ಯ ಪ್ರಕಾರಗಳನ್ನು ಕುರಿತು ಕೇಳುವಂತಾಯಿತು. ಇನ್ನು ಆಗ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುತ್ತಿದ್ದ ನಾಟಕ ವಿಚಾರವಂತೂ ಬಿಡಿ. ಅಲ್ಲಿಯ ಕೆಲವು ನಾಟಕಗಳಲ್ಲಿ ನಾನು ಸಹ ನಿರ್ದೇಶಕನಾಗಿದ್ದು, ಪಾತ್ರಗಳನ್ನೂ ನಿರ್ವಹಿಸಿದ್ದುಂಟು. ಹೀಗೆ ನಾನು ಕನ್ನಡವನ್ನು ಅಂತರಂಗದ ಭಾಷೆಯಾಗಿ ಮಾಡಿಕೊಂಡು ಇಂಗ್ಲಿಷ್ ಓದಿದವ.

◆ **ಕುಮಾರವ್ಯಾಸನನ್ನು ನಿಮಗೆ ಸಾಧ್ಯವಾಗಿಸಿದ್ದು ಕಿ.ರಂ. ಅವರಾ?**

ಹೌದು, ಅವರೇ. ಆದರೆ ಇಲ್ಲಿ ಮತ್ತೆ ಮನೆಯ ವಿಚಾರವನ್ನೂ ನೆನೆಯಬೇಕು. ತಂದೆ 1958ರಲ್ಲಿ ಪ್ರಕಟವಾದ ಮಾಸ್ತಿ, ಕುವೆಂಪು ಅವರು ಸಂಪಾದಿಸಿದ 'ಕರ್ಣಾಟ ಭಾರತ ಕಥಾ ಮಂಜರಿ'ಯನ್ನು ತಂದಿದ್ದರು, ಮಾತ್ರವಲ್ಲ ಓದುತ್ತಿದ್ದರು. ಇನ್ನು ನಮ್ಮ ದೊಡ್ಡಮ್ಮನ ಮಗಳು ರಾಮಿ ಅಂತಿದ್ದರು. ಅವರು, ಕುಮಾರವ್ಯಾಸನನ್ನು ತುಂಬ ಚೆನ್ನಾಗಿ ಓದುತ್ತಿದ್ದರು. ಹಾಗಾಗಿ ನನ್ನ ಕಿವಿಗೆ ಕುಮಾರವ್ಯಾಸನ ಪದ್ಯ ಕೇಳಿಸಿದ್ದು ಬಾಲ್ಯದಲ್ಲೇ, ಮನೆಯಲ್ಲೇ! ಆಮೇಲೆ ಡಿಗ್ರಿ ಪದವಿಯ ಓದಿನ ಸಂದರ್ಭದಲ್ಲಿ ಕಿ.ರಂ. ಸಿಕ್ಕಿದರು. ನಾನೂ ಅವರೂ ಪ್ರತಿಸಲ ಸೇರಿದಾಗಲೂ 'ಭಾರತ ಕಥಾ ಮಂಜರಿ'ಯ ಎರಡು ಸಂಧಿಯನ್ನಾದರೂ ಓದುತ್ತಿದ್ದೆವು.

◆ **ಎಪ್ಪತ್ತರ ದಶಕದಲ್ಲಿ ಎಕ್ಸ್‌ಪೋ, ಹಿಂದೀ ವಿರೋಧ, ಗೋಕಾಕ್ ಚಳವಳಿಗಳಲ್ಲಿ ಭಾಗವಹಿಸಿದ್ದುಂಟೆ?**

ಆ ಸಂದರ್ಭದಲ್ಲಿ ಸಾಂಸ್ಕೃತಿಕ ವಾತಾವರಣದೊಂದಿಗೆ ವಿದ್ಯಾರ್ಥಿಗಳು ತೀವ್ರವಾಗಿ ಸಾಮಾಜಿಕ ಚಳವಳಿಗಳಲ್ಲೂ ಭಾಗವಹಿಸಿದ್ದು ನಿಜ. ಪೊಲೀಸರಿಗೆ ಸಾರ್ವಜನಿಕರಿಗಿಂತ ವಿದ್ಯಾರ್ಥಿಗಳ ಮೇಲೆ ಕಣ್ಣಿದ್ದು ಅವರ ಮೇಲೆ ಲಾಠಿಛಾರ್ಜ್ ಆಗುತ್ತಿತ್ತು. ನಮ್ಮ ಹಾಸ್ಟೆಲ್ ಮೇಲೂ ಪೊಲೀಸರು ದಾಳಿ ಮಾಡಿದ್ದರು. ನಾನು ಹಿಂದೀ ವಿರೋಧಿ ಚಳವಳಿಯಲ್ಲಿ ಭಾಗವಹಿಸಿದ್ದುಂಟು. ಗೋಕಾಕ್ ಚಳವಳಿಯ ಹೊತ್ತಿಗೆ ನಾನು ಇಲ್ಲಿರಲಿಲ್ಲ. ಹಿಂದಿಯನ್ನು ಹರಡುವುದರಲ್ಲಿ ಹಿಂದೀವಾಲಾಗಳ ಅತಿರೇಕಗಳನ್ನು ಕುರಿತು **Language Spread and Language Variation Hindi in India** ಎಂಬ ಒಂದು ದೀರ್ಘ ಲೇಖನ ಬರೆದಿದ್ದೇನೆ. ಅದು ಪೀಟರ್ ಲೋವೆನ್ ಬರ್ಗ್ ಅವರು ಸಂಪಾದಿಸಿರುವ **Language Spread and Language Policy** ಎಂಬ ಪುಸ್ತಕದಲ್ಲಿ, ವಾಷಿಂಗ್ಟನ್ ಡಿ.ಸಿ. ಜಾರ್ಜ್‌ಟೌನ್ ಯೂನಿವರ್ಸಿಟಿ ಪ್ರೆಸ್‌ನಿಂದ ಪ್ರಕಟವಾಗಿ, ಅದು ಕನ್ನಡಕ್ಕೂ ಬಂದಿದೆ. ನಾನೆಂದೂ ಹಿಂದೀ ವಿರೋಧಿಯಾಗಿರಲಿಲ್ಲ. ಆದರೆ ಹಿಂದೀವಾಲಾಗಳ ಇತರ ಭಾರತೀಯ